ಅ.ದಾ.ನಂ.128/2022
ಡಿ.ಡಬ್ಲೂ:1

**<u>ಸಾಕ್ಷಿಯನ್ನು ಇಂದು ದಿನಾಂಕಃ 17.03.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು</u>**
**<u>ಪಾಟೀ ಸವಾಲುಃ ಶ್ರೀ. ಎಮ್ ಎಚ್ ಕೆ., ವಕೀಲರಿಂದ 2 ಎ ದಿಂದ ಸಿವರೆಗಿನ ಪ್ರತಿವಾದಿಯರ ಪರವಾಗಿ</u>**

1. ನಾನು ಒಕ್ಕಲುತನ ಉದ್ಯೋಗ ಮಾಡುತ್ತೇನೆ. ವಾದಿಯು ನನಗೆ ಅಕ್ಕನಾಗಬೇಕು. ವಾದಿಯು ನಿರಲಗಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ನಾನು ಕಡಕೋಳ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನನಗೆ ಮತ್ತು ವಾದಿಗೆ ಒಳ್ಳೆಯ ಸಂಬಂಧ ಇರುತ್ತದೆ ಎಂದರೆ ಸಾಕ್ಷಿಯು ಅಪ್ಪಟಕಪ್ಟೇ ಇರುತ್ತದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಸರ್ವೇ ನಂ.132/1 ಕ್ಷೇತ್ರ 04 ಎಕರೆ 03 ಗುಂಟೆ ಮತ್ತು ಸರ್ವೇ ನಂ.132/2 ಕ್ಷೇತ್ರ 06 ಗುಂಟೆ 24 ಗುಂಟೆ ಇರುತ್ತದೆ. ನಿಪಿ-2 ರ ಪಹಣಿ ಪತ್ರಿಕೆಯಲ್ಲಿ ವಾದಿ ಮತ್ತು ಪ್ರತಿವಾದಿಯರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನಿಪಿ-3 ರ ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರು ನಮೂದು ಇರುತ್ತದೆ ಎಂದರೆ ಸರಿ.

2. ಮೂಲತಃ ಸರ್ವೇ ನಂ.132 ಒಂದೇ ಇತ್ತು ಎಂದರೆ ಸರಿ. ಸರ್ವೇ ನಂ.132/1 ರ ಆಸ್ತಿಯ ಪಶ್ಚಿಮ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ನನ್ನ ಹೆಸರಿನಲ್ಲಿರುವ ಆಸ್ತಿಯು ಪೂರ್ವ ಭಾಗಕ್ಕೆ ಇರುತ್ತದೆ ಎಂದರೆ ಸರಿ. ಸರ್ವೇ ನಂ.132 ರಲ್ಲಿ ಮೂರು ಪಟ್ಟಿಗಳು ಆಗಿರುತ್ತವೆ ಎಂದರೆ ಸರಿ. ನನ್ನ ಹೆಸರಿನಲ್ಲಿರುವ ಸರ್ವೇ ನಂ.132/3 ಕ್ಷೇತ್ರ 04 ಎಕರೆ 03 ಗುಂಟೆ ಜಮೀನನ್ನು ನಾನೇ ಸಾಗುವಳಿ ಮಾಡುತ್ತೇನೆ ಎಂದರೆ ಸರಿ. ಅದೇ ರೀತಿಯಾಗಿ ಸರ್ವೇ ನಂ.132/1 ಕ್ಷೇತ್ರ 4 ಎಕರೆ 03 ಗುಂಟೆ ಜಮೀನನ್ನು ಮೃತ 2 ನೇ ಪ್ರತಿವಾದಿಯು ಸಾಗುವಳಿ ಮಾಡುತ್ತಿದ್ದನು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಕುಟುಂಬದ ಎಲ್ಲಾ ಆಸ್ತಿಯನ್ನು ಮೃತ 2 ನೇ ಪ್ರತಿವಾದಿಯು ಸಾಗುವಳಿ ಮಾಡುತ್ತಿದ್ದನು ಮತ್ತು ನಮ್ಮ ಮನೆತನದ ಎಲ್ಲಾ ಹಿರಿಯತನವನ್ನು ಮಾಡುತ್ತಿದ್ದನು ಎಂದು ಹೇಳುತ್ತಾರೆ.

3. ನನ್ನ ತಂದೆಯು 2009 ರಲ್ಲಿ ಮೃತಪಟ್ಟಿರುತ್ತಾನೆ. ನನ್ನ ತಂದೆಯ ಜೀವಂತ ಇದ್ದಾಗ 1982 ರಲ್ಲಿ ಮೂರು ಪಟ್ಟಿಗಳನ್ನು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು 1982 ರಲ್ಲಿ ಚಿಕ್ಕವನಾಗಿದ್ದೆ ಮತ್ತು ನನ್ನ ತಾಯಿಯು ಅಜ್ಞಾನ ಪಾಲಕ ಸರ್ವಕ್ಷಕಳಾಗಿದ್ದಳು ಎಂದು ಹೇಳುತ್ತಾರೆ. ನನ್ನ ಜನ್ಮ ದಿಃ 15.12.1967 ಇರುತ್ತದೆ. ನನಗೆ ಯಾವಾಗ 18 ವರ್ಷ ವಯಸ್ಸಾಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ.

4. ನಿಪಿ-33 ರ ಪ್ರಕಾರ ಡ.ನಂ.963 ಮಂಜೂರು ಆಗಿ ಮೂರು ಪಟ್ಟಿಗಳು ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಾನು ನಿಪಿ-33 ರ ಡ.ನಂ.963 ನ್ನು ಮೇಲ್ಮನವಿ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ನನ್ನ ತಂದೆಯು 1982 ರಲ್ಲಿ ಮೌಖಿಕವಾಗಿ ದಾವಾ ಆಸ್ತಿ ಜಮೀನುಗಳನ್ನು ನಮಗೆ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1982 ರಲ್ಲಿ ವಾದಿಯು ನಮ್ಮ ಮನೆಗೆ ಬರುವುದು ಮತ್ತು ಹೋಗುವುದು ಮಾಡುತ್ತಿದ್ದರು ಎಂದರೆ ಸರಿ. ವಾದಿಗೆ 1982 ರಲ್ಲಿ ವಿಭಾಗ ಮಾಡಿರುವ ವಿಷಯ ಗೊತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತಾಯಿ ಮೃತ ಪಟ್ಟ ನಂತರ ಅವರ ಹೆಸರಿನಲ್ಲಿರುವ ಮಧ್ಯದ ಜಮೀನನ್ನು 2 ನೇ ಪ್ರತಿವಾದಿ ಮತ್ತು ನಾನು ಸಮನಾಗಿ ಹಂಚಿಕೊಳ್ಳಬೇಕೆಂದು ಮಾತುಕತ್ತೆ ಆಗಿತ್ತು ಎಂದರೆ ಸರಿಯಲ್ಲ.

5. ಸಂಗಪ್ಪನ ಹೆಸರಿಗೆ ಇರುವ 4 ಎಕರೆ 03 ಗುಂಟೆ ಜಮೀನನ್ನು ಸಂಗಪ್ಪನ ವಾರಸುದಾರರು ಉಳುಮೆ ಮಾಡುತ್ತಾರೆ ಎಂದರೆ ಸಾಕ್ಷಿಯು ಸುಮಾರು 4 ವರ್ಷಗಳಿಂದ ಉಳುಮೆ ಮಾಡುತ್ತಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಹೆಸರಿನಲ್ಲಿರುವ ಆಸ್ತಿಯನ್ನು ನಾನೇ ಉಳುಮೆ ಮಾಡುತ್ತಿದ್ದೇನೆ ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ದಾವೆ ಆದ ನಂತರ ನಾನು ಉಳುಮೆ ಮಾಡುತ್ತಿರುತ್ತೇನೆ ಎಂದು ಹೇಳುತ್ತಾರೆ. ನನ್ನ

ತಾಯಿಯ ನನ್ನ ಹತ್ತಿರ ಇರುತ್ತಾರೆ. ನನ್ನ ತಾಯಿಗೆ 85 ವರ್ಷ ವಯಸ್ಸು ಇರುತ್ತದೆ. ನನ್ನ ತಾಯಿಗೆ ಕಣ್ಣು ಕಾಣುವುದಿಲ್ಲ, ಕಿವಿ ಕೇಳುವುದಿಲ್ಲ ಮತ್ತು ಮಾನಸಿಕ ಸ್ಥಿರತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ನಾನು ನ್ಯಾಯಾಲಯಕ್ಕೆ ಕರೆದುಕೊಂಡು ಬರುತ್ತೇನೆ. ನನ್ನ ತಾಯಿಯು ಆರೋಗ್ಯವಾಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯು ನಾನು ಹೇಳಿದಂತೆ ಕೇಳುತ್ತಾಳೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನನ್ನ ತಾಯಿಯು ಹೆಬ್ಬಟ್ಟಿನ ಗುರುತನ್ನು ಹಾಕುತ್ತಾಳೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ 2ಎ ದಿಂದ 2ಸಿ ವರೆಗಿನ ಪ್ರತಿವಾದಿಯರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಾವಕಾಶ ಕೋರಿದ್ದರಿಂದ ಸಮಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

1 ನೇ **ಹೆಚ್ಚುವರಿ ಸಿವಿಲ್**
**ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**